ಅ) ಹುಬ್ಬಳ್ಳಿ-ಧಾರವಾಡದಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದ್ದ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ಪ್ರಾರಂಭಿಸಲು ವಿಳಂಬವಾಗಿರುವುದಕ್ಕೆ ಕಾರಣಗಳೇನು ?

ಇ) ಉತ್ತರ ಕರ್ನಾಟಕದ ಜನತೆಗೆ ಈ ಪೀಠ ಸ್ಥಾಪನೆಯಿಂದ ಅನುಕೂಲವಾಗುವುದೆಂಬ ವಿಚಾರವು ಸರ್ಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಉಚ್ಚ ನ್ಯಾಯಾಲಯದ ಪೀಠವೊಂದನ್ನು ಹುಬ್ಬಳ್ಳಿ-ಧಾರವಾಡದಲ್ಲಿ ತೆರೆಯಲು ಬಹಳ ಹಿಂದಿನಿಂದಲೂ ಸರ್ಕಾರ ಕೇಂದ್ರದ ಮೇಲೆ ಒತ್ತಾಯ ಮಾಡುತ್ತಿದೆ. ವಿವಿಧ ರಾಜ್ಯಗಳ ಕೋರಿಕೆಯನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು ಜಸ್ಟೀಸ್ ಶ್ರೀ ಜಸ್ವಂತ ಸಿಂಗ್‌ರವರ ನೇತೃತ್ವದಲ್ಲಿ ರಚಿಸಿದ್ದ ಆಯೋಗವು ಕೆಲವೊಂದು ಶಿಫಾರಸ್ಸುಗಳನ್ನು ಮಾಡಿದೆ. ಈ ಶಿಫಾರಸ್ಸುಗಳ ಅನುಸಾರವಾಗಿ ಹುಬ್ಬಳ್ಳಿ-ಧಾರವಾಡದಲ್ಲಿ ಉಚ್ಚ ನ್ಯಾಯಾಲಯದ ಪೀಠವೊಂದನ್ನು ಸ್ಥಾಪಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಆಗ್ರಹ ಪಡಿಸುತ್ತಿದೆ.

ಇ) ಬಂದಿದೆ.

ಚುಂಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

Road Accidents in Bangalore City

1262. SRI N. M. ADYANTHAIAH (Surathkal).—Will the chief Minister be pleased to state ?

a) How many have died and injured in the road accidents from 1-1-87 to 29-2-88 in Bangalore city. (Separate monthwise details be furnished) ?

b) What are the steps taken by the Government to prevent road accidents ?

SRI RAMAKRISHNA HEGDE (Chief Minister).—

a) 1. No. died 501
2. No. injured 5366

(Monthwise details are furnished in the Annexure)

b) 1. Strict action taken as per law against those driving recklessly.

2) Driving licences are being suspended as per rules.

3) To instill better road sense among the public traffic rules are publicised through the films, Television, Radio and lectures are given by the Police Officers (Traffic)